# ಭರ್ತಿ ಚರ್ಚೆಯ ಮಧ್ಯೆ ಅನಿಮಲ್ ಭರ್ಜರಿ ಗಳಿಕೆ



■ ವಿಶಾಖ ಎನ್.

'ರಣಬೀರ್ ಕಪೂರ್, ಸಂದೀಪ್ ರೆಡ್ಡಿ ವಂಗ ಇಬ್ಬರ ಬೂಟನ್ನು ನಾನು ನೆಕ್ಕುವೆ' – ನಿರ್ದೇಶಕ ರಾಮ್‌ಗೋಪಾಲ್ ವರ್ಮ ಹೀಗೆಂದಾಗ ಎಷ್ಟೋ ಜನರಿಗೆ ಅಚ್ಚರಿಯೇನೂ ಆಗಿರಲಿಕ್ಕಿಲ್ಲ. ಯಾಕೆಂದರೆ, ರಾಮ್‌ಗೋಪಾಲ್ ವರ್ಮ ವಿಲಕ್ಷಣ ಹೇಳಿಕೆಗಳನ್ನು ಕೊಡಲಾರಂಭಿಸಿ ದಶಕವೇ ಆಗಿದೆ. 'ಅನಿಮಲ್' ಹಿಂದಿ ಸಿನಿಮಾ ಬಿಡುಗಡೆಯಾಗಿ ವಾರವಾಗುವಷ್ಟರಲ್ಲೇ ಭಿನ್ನ ರೀತಿಯ ಪ್ರತಿಕ್ರಿಯೆಗಳು ಹರಿದುಬರಲು ಪ್ರಾರಂಭಿಸಿದ್ದು, ಆ ಸಿನಿಮಾ ಗಲ್ಲಾಪೆಟ್ಟಿಗೆಯಲ್ಲೂ ಯಶಸ್ಸು ಕಂಡಿದೆ.

ಆ ಸಿನಿಮಾದಲ್ಲಿ ತೃಪ್ತಿ ಡಿಮ್ರಿ ಒಂದು ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ಪಾತ್ರಕ್ಕೆ ತನ್ನ ಬೂಟು ನೆಕ್ಕುವಂತೆ ರಣಬೀರ್ ನಿರ್ವಹಿಸಿರುವ ಪಾತ್ರವು ಚಿತ್ರದಲ್ಲಿ ತಾಕೀತು ಮಾಡುತ್ತದೆ. ಈ ದೃಶ್ಯವನ್ನು ರಾಮ್‌ಗೋಪಾಲ್ ವರ್ಮ ಇಷ್ಟಪಟ್ಟಿಲ್ಲ. ಆದರೆ, ಖುದ್ದು ತಾವೇ ನಟ, ನಿರ್ದೇಶಕರ ಬೂಟು ನೆಕ್ಕಲು ಸಿದ್ಧ ಎನ್ನುವ ಮೂಲಕ ಮೆಚ್ಚುಗೆಯ ರೂಪಕವನ್ನು ಹೊರಹಾಕಿದ್ದಾರೆ. ಅವರ ಪ್ರಕಾರ 'ಇದು ಮಾಮೂಲಿ ಸಿನಿಮಾ ಅಲ್ಲ, ಒಂದು ಸೋಷಿಯಲ್ ಸ್ಟೇಟ್‌ಮೆಂಟ್'.

ತಮಿಳು ಚಿತ್ರಗಳಲ್ಲಿ ಹೆಚ್ಚಾಗಿ ನಟಿಸುವ ನಾಯಕಿ ತ್ರಿಶಾ ಇತ್ತೀಚೆಗೆ 'ಲಿಯೊ' ಸಿನಿಮಾದ ತಮ್ಮ ಸಹನಟ ಮನ್ಸೂರ್ ಅಲಿ ಖಾನ್ ನೀಡಿದ್ದ ಹೇಳಿಕೆಯೊಂದನ್ನು ಖಂಡಿಸಿದ್ದರು. 'ಲಿಯೊ ಚಿತ್ರದಲ್ಲಿ ತ್ರಿಶಾ ಅವರನ್ನು ರೇಪ್ ಮಾಡುವ ದೃಶ್ಯ ಇರಲಿಲ್ಲದ್ದಕ್ಕೆ ಬೇಸರವಾಯಿತು' ಎಂದು ಮನ್ಸೂರ್ ಹೇಳಿದ್ದರು. ಇದನ್ನು ಖಂಡಿಸಿದ್ದೇ ಅಲ್ಲದೆ, ಇನ್ನು ಮುಂದೆ ಆ ನಟ ಇರುವ ಸಿನಿಮಾಗಳಲ್ಲಿ ತಾವು ಅಭಿನಯಿಸುವುದಿಲ್ಲ ಎಂದೂ ತ್ರಿಶಾ ಖಂಡಾತುಂಡವಾಗಿ ಹೇಳಿದ್ದರು. 'ಅನಿಮಲ್' ಸಿನಿಮಾ ನೋಡಿಬಂದ ಮೇಲೆ ತ್ರಿಶಾ, 'ಒನ್ ವರ್ಡ್–ಕಲ್ಟ್! ಪಾ...' ಎಂಬರ್ಥದ ಒಕ್ಕಣೆಯನ್ನು ಸಾಮಾಜಿಕ ಜಾಲತಾಣದಲ್ಲಿ ತೇಲಿಬಿಟ್ಟರು. ಇದನ್ನು ಓದಿದ ಎಷ್ಟೋ ಜನ 'ತ್ರಿಶಾ ಅವರದ್ದು ಇಬ್ಬಗೆಯ ನಿಲುವು; ಒಂದು ಕಡೆ ಅತ್ಯಾಚಾರ ದೃಶ್ಯ ಬಯಸಿದವರನ್ನು ಖಂಡಿಸುತ್ತಾರೆ, ಈ ಸಿನಿಮಾದಲ್ಲಿ ನಾಯಕ ಗಂಡಾಳಿಕೆ ತೋರಿದರೂ ಮೆಚ್ಚುತ್ತಾರೆ' ಎಂಬರ್ಥದಲ್ಲಿ ಟೀಕಿಸಿದರು. ದೊಡ್ಡ ಪ್ರಮಾಣದಲ್ಲಿ ಟೀಕೆಗಳು ಹರಿದುಬಂದದ್ದೇ ತ್ರಿಶಾ 'ಎಕ್ಸ್'ನಲ್ಲಿ ಹಾಕಿದ್ದ ತಮ್ಮ ಪೋಸ್ಟ್ ಡಿಲೀಟ್ ಮಾಡಿಬಿಟ್ಟರು.

'ಇಟ್ಸ್ ಇಂಟರ್‌ನ್ಯಾಷನಲ್' ಎಂದು ತೆಲುಗು ನಟ ನಾನಿ ಮೆಚ್ಚಿ 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದ್ದಾರೆ. ರಾಜಮೌಳಿ ಪುತ್ರ ಎಸ್.ಎಸ್. ಕಾರ್ತಿಕೇಯ, 'ಈ ಸಿನಿಮಾದಿಂದ ಮಾಸ್ ಸೂಪರ್‌ಸ್ಟಾರ್ ಆಗಿ ರಣಬೀರ್ ಹೊರಹೊಮ್ಮಿದ್ದಾರೆ' ಎಂದು ಮೆಚ್ಚುಗೆ ಸೂಸಿದ್ದಾರೆ.

'ನಿರ್ದೇಶಕರು ತಮ್ಮಿಷ್ಟದ ಸಂವೇದನೆಯ ಸಿನಿಮಾ ಮಾಡಬಹುದು. ನೈತಿಕತೆ ಎನ್ನುವುದೇ ಸಾಪೇಕ್ಷ ಸಂಗತಿ. ಅದನ್ನು ಮುಂದುಮಾಡಿ, ನಿರ್ದೇಶಕರು ಇಂತಹ ಸಿನಿಮಾ ಮಾಡಬಾರದು, ಇಂತಹದ್ದನ್ನು ಮಾತ್ರ ಮಾಡಬೇಕು ಎಂದು ಅಪ್ಪಣೆ ಕೊಡಿಸುವುದು ಸರಿಯಲ್ಲ. ಕಬೀರ್ ಸಿಂಗ್ ಸಿನಿಮಾದಲ್ಲಿ ನಾಯಕನ ಪಾತ್ರ ಪೋಷಣೆಯನ್ನೂ ಈ ಹಿಂದೆ ಅನೇಕರು ಟೀಕಿಸಿದ್ದರು. ವಾಸ್ತವದಲ್ಲಿ ಶೇ. 80ರಷ್ಟು ಪುರುಷರ ವ್ಯಕ್ತಿತ್ವ ಕಬೀರ್ ಖಾನ್ ತರಹವೇ ಇರುತ್ತದೆ' ಎಂದು ಹಿಂದಿ ಸಿನಿಮಾ ನಿರ್ದೇಶಕ ಅನುರಾಗ್ ಕಶ್ಯಪ್ ಕೊಟ್ಟಿರುವ ಪ್ರತಿಕ್ರಿಯೆಯೂ ಚರ್ಚೆಗೆ ಒಳಪಟ್ಟಿದೆ. ಅನುರಾಗ್ ಇನ್ನೂ 'ಅನಿಮಲ್' ಸಿನಿಮಾ ನೋಡಿರಲಿಲ್ಲವಾದದ್ದರಿಂದ ಅದರ ಬಗೆಗೆ ಮಾತನಾಡಿಲ್ಲ.



ಕ್ರಿಕೆಟರ್ ಜಯದೇವ್ ಉನದ್ಕತ್ ಅವರಿಗೆ ಈ ಸಿನಿಮಾ ತುಸುವೂ ಇಷ್ಟವಾಗಿಲ್ಲ. ಇದು ಅಭಿರುಚಿಹೀನ ಸಿನಿಮಾ ಎಂದು ಅವರು ಟೀಕಿಸಿದ್ದು, ಅದಕ್ಕೂ ಕೆಲವರು ಟ್ರೋಲ್ ಮಾಡಿದ್ದಾರೆ.

ಅಮೀರ್ ಖಾನ್ ವರ್ಷಗಳ ಹಿಂದೆ ಒಂದು ಮಾತು ಹೇಳಿದ್ದರು, 'ಪ್ರತಿಭೆ ಇಲ್ಲದ ನಿರ್ದೇಶಕರು ಹಿಂಸೆಯನ್ನೇ ಪ್ರಧಾನವಾಗಿಸಿ ಸಿನಿಮಾ ಮಾಡುವ ದಾರಿ ಕಂಡುಕೊಂಡಿದ್ದಾರೆ' ಎಂದು. ಅವರು ಹಾಗೆ ಹೇಳಿದ್ದ ವಿಡಿಯೊ ಕೂಡ ಈಗ ಹರಿದಾಡುತ್ತಿದೆ.

'ನಿಂದಕರಿರಬೇಕು' ಎನ್ನುವುದು ದಾಸವಾಣಿ. 'ನಿಂದಕರಿಗೆ ಕೆಟ್ಟ ಸಂಜ್ಞೆಗಳನ್ನೂ ಮಾಡಿ ನಾನು ಏನೆಂದು ತೋರಿಸುವೆ' ಎಂಬ ಧಾಟಿಯ ಸನ್ನಿವೇಶಗಳನ್ನು ಕೂಡ ಸಂದೀಪ್ ರೆಡ್ಡಿ ವಂಗ 'ಅನಿಮಲ್' ಸಿನಿಮಾದಲ್ಲಿ ತೋರಿಸಿದ್ದಾರೆ. ಇದನ್ನು ಎಷ್ಟೋ ಸಿನಿಮಾ ವಿಮರ್ಶಕರು ನಮೂದಿಸಿ ಬರೆದಿದ್ದಾರೆ.

ದೊಡ್ಡ ಮಟ್ಟದ ಚರ್ಚೆಯನ್ನು ಹುಟ್ಟುಹಾಕಿರುವ ಈ ಚಿತ್ರ ತೆರೆಕಂಡ ಮೊದಲ ನಾಲ್ಕೈದು ದಿನಗಳಲ್ಲಿಯೇ ಮುನ್ನೂರು ಕೋಟಿ ರೂಪಾಯಿಗೂ ಹೆಚ್ಚು ಹಣ ಬಾಚಿ ಹಾಕಿರುವುದು ಹಿಂದಿ ಚಿತ್ರರಂಗದ ಅನೇಕ ದಿಗ್ಗಜರೂ ಕಣ್ಣರಳಿಸುವಂತೆ ಮಾಡಿದೆ. ■